

# ಯಾವ ಜನ್ಮದ ಮೈತ್ರಿ..!

ಬೆಕ್ಕಿಗೆ ಇಲಿ ತಿನ್ನುವುದೆಂದರೆ ಪಂಚಪ್ರಾಣ. ಬೆಕ್ಕು, ಇಲಿಯನ್ನು ಬೇಟೆಯಾಡಿ ತಿನ್ನಲು ಸದಾ ಹೊಂಚು ಹಾಕುತ್ತಿರುತ್ತದೆ. ಅದಕ್ಕಾಗಿಯೇ ಮನೆಯಲ್ಲಿ ಇಲಿಗಳ ಹಾವಳಿ ಹೆಚ್ಚಾಗಿದ್ದರೆ ಬೆಕ್ಕನ್ನು ಸಾಕುತ್ತಾರೆ.

ಆದರೆ ಚೀನಾ ದೇಶದ ವಾಯುವ್ಯ ಭಾಗದಲ್ಲಿರುವ ಚಾಂಗ್ ಚುನ್ ಊರಿನ ಬೆಕ್ಕೊಂದು ಇದಕ್ಕೆ ಸಂಪೂರ್ಣ ಅಪವಾದ. ಇಲ್ಲಿನ ಲೀ ಎಂಬಾತನ ಮನೆಯ ಮುರಿದ ಕಿಟಕಿಯಿಂದ ಇಲಿಯೊಂದು ಹೇಗೋ ಒಳಗೆ ಸೇರಿಕೊಂಡಿತಂತೆ. ಇದರ ಉಪಟಳ ತಾಳಲಾರದ ಲೀ, ಇದನ್ನು ಹಿಡಿಯಲು ವಿಧ ವಿಧವಾಗಿ ಪ್ರಯತ್ನಿಸಿದ. ಆದರೂ ಇಲಿಯು ಈತನ ಬಲೆಗೆ ಬೀಳಲಿಲ್ಲ. ಪಕ್ಕದ ಮನೆಯವರು ಸಾಕಿದ ಡಾ ಹ್ವಾಂಗ್ ಹೆಸರಿನ ಬೆಕ್ಕನ್ನು ತನ್ನ ಮನೆಗೆ ಕರೆದುಕೊಂಡು ಬಂದ. ಬೆಕ್ಕಿಗೆ ಊಟ ನೀಡದೇ ಉಪವಾಸವಿಡಲು ಅದರ ಒಡೆಯನಿಗೆ ಲೀ ಮೊದಲೇ ತಿಳಿಸಿದ್ದನಂತೆ. ಇದು ತನ್ನ ಮನೆಯೊಳಗೆ ಸೇರಿಕೊಂಡಿದ್ದ ಇಲಿಯನ್ನು ಹೆದರಿಸಿ ಅದನ್ನು ಬೇಟೆಯಾಡುತ್ತದೆ ಎಂದೇ ಭಾವಿಸಿದ್ದ ಲೀ ಗೆ ಆಶ್ಚರ್ಯವೋ ಆಶ್ಚರ್ಯ.

ಬೆಕ್ಕನ್ನು ಕಂಡ ಇಲಿ, ಮೊದಲು ಹೆದರಿ ನಡುಗಲು ಪ್ರಾರಂಭಿಸಿತು. ಆದರೆ ಬೆಕ್ಕು ಮಾತ್ರ ಅದನ್ನು ತಿನ್ನದೇ ಪ್ರೀತಿಯಿಂದ ಅದರ ಮೈಯನ್ನೆಲ್ಲಾ ನೆಕ್ಕತೊಡಗಿತು. ಅದ್ಯಾವ ಜನ್ಮದ ಮೈತ್ರಿಯೋ ಏನೋ ಎಂಬಂತೆ ಇಲಿಯೂ ಸಹ ಬೆಕ್ಕಿನೊಡನೆ ಚೆಲ್ಲಾಟ ಆಡಲು ಪ್ರಾರಂಭಿಸಿತು. ಬಲು ಅಪರೂಪದ ಈ ಬೆಕ್ಕು ಇಲಿಗಳ ಗೆಳೆತನ ಹೇಗಿದೆ ನೋಡಿ..!

■ ಪ್ರಿಯಾಂಕ ವಿ.ಎಚ್.



